ವಿ.ಎಸ್. ಹಿಂದೂಪುರ, ಬಳ್ಳಾರಿ

*ನೋಟನ್ನು ಲಕ್ಷ್ಮಿ ಎಂದು ಪೂಜಿಸುವ ಕೆಲವರು ಬೆರಳಿಗೆ ಉಗುಳು ಹಚ್ಚಿಕೊಂಡು*



*ಎಣಿಸುತ್ತಾರಲ್ಲಾ...?*

ಎಂಜಲು ಕಾಸಿಗೆ ಕೈಯೊಡ್ಡುವುದಕ್ಕಿಂತ ಕಾಸಿಗೆ ಎಂಜಲೊಡ್ಡಿ ಎಣಿಸುವವರ ತಪ್ಪನ್ನು ಲಕ್ಷ್ಮಿ ಕ್ಷಮಿಸುವಳಂತೆ.

ಎಸ್.ಸಿ. ರಮೇಶ್, ಮೈಸೂರು

*ಎರಡು ಕಣ್ಣು, ಕಿವಿ, ಕೈಕಾಲು ಕೊಟ್ಟ ದೇವರು ಒಂದೇ ನಾಲಿಗೆ ಕೊಟ್ಟದ್ದೇಕೆ?*

ಅವೆಲ್ಲ ಎರಡಿದ್ದರೂ ಇದೊಂದರಿಂದಲೇ ಮನುಜ ಅವೆಲ್ಲಕ್ಕೂ ಜಖಂ ಮಾಡಿಕೊಳ್ಳಬಲ್ಲನೆಂದು ದೇವನಿಗೆ ಗೊತ್ತಿತ್ತಂತೆ.

ಜಿ.ಆರ್.ಆದಿನಾರಾಯಣಮುನಿ, ಬೆಂಗಳೂರು

*ನಿಮ್ಮ ಊರಿನಲ್ಲಿ ನಾಯಿಗಳೂ ಇವೆಯೆ?*

ಮೊದಲು ಇದ್ದವು. ನೀವು ಬಂದಮೇಲೆ ಎಲ್ಲವೂ ನಾಪತ್ತೆ.

ಎಚ್.ಆರ್. ದೇಸಾಯಿ, ರಾಯಚೂರು

*ಭವಿಷ್ಯ ಹೇಳುವವರು ನನ್ನ ಸಾವಿನ ನಿರ್ದಿಷ್ಟ ದಿನಾಂಕ ಮತ್ತು ಸಮಯ ಹೇಳಬಲ್ಲರೆ?*



ಇದನ್ನು ಹೇಳಲು ಹೆಲ್ತ್ ಇನ್ಶೂರೆನ್ಸ್, ಬ್ಯಾಂಕ್ ಬ್ಯಾಲೆನ್ಸ್ ಮುಗಿದ ದಿನವೇ ವೆಂಟಿಲೇಟರ್ ತೆಗೆಯುವ ವೈದ್ಯರೇ ಸಾಕು.

ಫಾಲನೇತ್ರ ಜಿ. ಸಜ್ಜನ, ಶಿರಸಿ

*ಆರಂಕುಶವಿಟ್ಟೊಡಂ ನಿಮ್ಮ ಮನ ಏನನ್ನು ನೆನೆಯುವುದು?*

ಬನ, ವಾರಿ, ದೇಶ, mum.

ಎಂ.ಎ. ಕುಮಾರ್, ಬೆಂಗಳೂರು

*ಸೃಷ್ಟಿಕರ್ತ ಬ್ರಹ್ಮ ಗಂಡಿಗಿಂತ ಹೆಣ್ಣಿನ ಎತ್ತರ ಕಮ್ಮಿ ಮಾಡಲು ಕಾರಣ?*

ರಸಿಕತನವೇ; ನಲ್ಲೆಗೆ ನಲ್ಲ ಜಡೆ ಹೆಣೆಯಲು ಅನುವಾಗುವಂತೆ ಹೈಟ್ ಅಡ್ಜಸ್ಟ್ ಮಾಡಿದನಂತೆ ಬೊಮ್ಮ.

ಲಕ್ಷ್ಮಣ್ ಜಿ. ಮೈಸೂರು

*ಸದನದಲ್ಲಿ ಬಾವಿಯನ್ನು ಏತಕ್ಕಾಗಿ ಮಾಡಿರಬಹುದು?*

ಸದನದಲ್ಲಿರುವ ಕಪ್ಪೆಗಳಿಗೆ ತಳ ಸೇರಿ ವಟರ್ ವಟರ್ ಎನ್ನಲು ಅನುಕೂಲವಾಗಲೆಂದು.

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ

*ರುಂಡ ರಕ್ಷಣೆಗೆ ಶಿರಸ್ತ್ರಾಣ; ಮುಂಡ ರಕ್ಷಣೆಗೆ?*

ರುಂಡದೊಳಗಿನ ಧೀಶಕ್ತಿ; ಅದು ಇಲ್ಲದವರಿಗೆ ಮುಂಡವೇ ಆಗಲಿ, ರುಂಡವೇ ಆಗಲಿ ವ್ಯರ್ಥ.

ವಿ. ಹೇಮಂತಕುಮಾರ್, ಬೆಂಗಳೂರು

*ಪ್ರಾಣಿಗಳಂತೆ ಮನುಷ್ಯರಿಗೂ ಬಾಲ ಇದ್ದಿದ್ದರೆ?*

ಇವೆಯಲ್ಲ; ಮಾನವ ರೂಪದಲ್ಲೇ ಇರುವ ಅವನ್ನು ಚೇಲಾ ಎಂದು ಕರೆಯುತ್ತಾರೆ.

ಕಾಳೀಹುಂಡಿ ಶಿವಕುಮಾರ್, ಮೈಸೂರು

*ಇಲ್ಲೊಬ್ಬನು ಪ್ರೇಯಸಿಯ ಮನಸ್ಸು ಮಗುವಿನ ಮನಸ್ಸಿನಂತೆ ಇರುತ್ತದೆ ಅಂತಾನಲ್ಲಾ....?*

ನಿಜ. ಇಬ್ಬರೂ ಅರ್ಥ ಮಾಡಿಕೊಳ್ಳಲು, ಸುಧಾರಿಸಲು ಬಲು ಕಷ್ಟ!

ರಾಜಶೇಖರರೆಡ್ಡಿ, ಸಿರೇಕೊಳಂ

*ಮಾತಿನ ನಡುವೆ ಅಯ್ಯೋ ರಾಮಚಂದ್ರ ಅಂತಾರೆ. ಏಕೆ ಸಾರ್?*

ದೂರದಲ್ಲೆಲ್ಲೋ ತಾಟಕಿ ಕಂಡಿರುತ್ತಾಳಂತೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ರಾಮನ ಹೆಸರಿನ ನಿಮಗೆ ಲವ-ಕುಶರು ಇದ್ದಾರೆಯೇ ರಾಂ?*

ನನ್ನದು ಅದಕ್ಕಿಂತ ಉತ್ತಮ ಬದುಕು. ಲವ್ ಮಾಡುವವರು ಇದ್ದಾರೆ; ಖುಷ್ ಆಗಿದ್ದೇನೆ.

ಟಿ.ಎಂ. ಮಾನಪ್ಪ, ಶಿವಮೊಗ್ಗ

*ಹಣದ ಮುಂದೆ ಸತ್ಯ ಮಂಕಾಗಲು ಕಾರಣ?*

ವೆಲ್ಡಿಂಗ್ ಆದಾಕ್ಷಣ ಕವಿದ ಮಂಕು ಅದು; ತಾತ್ಕಾಲಿಕ ಬೆಳಕಿಗೆ ಪ್ರಭೆ ಹೆಚ್ಚು.

ಬಿ. ಚಂದ್ರೇಗೌಡ, ಬೆಂಗಳೂರು

*ಸತ್ತವರಿಗೆ ಗೋರಿ ಕಟ್ಟುತ್ತಾರೆ. ಏಕೆ?*

ಇದ್ದಾಗಲೇ ಕಟ್ಟಿದರೆ ಹೋಗಿ ಮಲಗಲು ಒಪ್ಪುವುದಿಲ್ಲವಲ್ಲ....!

## ಬಹುಮಾನಿತ ಪ್ರಶ್ನೆ

ಸುಶೀಲ ಆರ್ ರಾಮಣ್ಣ, ಬೆಂಗಳೂರು

*ಎಣ್ಣೆ ಉಳಿಸಲೆಂದು ನಾನ್ ಸ್ಟಿಕ್ ತವ ಕೊಂಡು, ಎಣ್ಣೆ ಹುಯ್ದು ದೋಸೆ ಮಾಡುತ್ತಾರಲ್ಲ...?*

ತವ ನಾನ್ ಸ್ಟಿಕ್ ಆದರೂ ಅವರು ತಯಾರಿಸಿದ ದೋಸೆ ಹಿಟ್ಟು ಆಲ್ ಸ್ಟಿಕ್ ಗುಣಮಟ್ಟದ್ದಂತೆ.

ಹಾಡ್ಯ ಬ. ಜಯಾನಂದ, ಮೈಸೂರು

*ಪ್ರಶ್ನಾತೀತ ನಾಯಕ ಎನ್ನುತ್ತಾರಲ್ಲ, ಹಾಗೆಂದರೇನು?*

ಅವನಿಗೆ ಏನೆಂದರೆ ಏನೂ ತಿಳಿಯದು; ಪ್ರಶ್ನಿಸುವುದೇ ವ್ಯರ್ಥವೆಂದು.

ಅಕ್ಷಯ ಜೈನ್, ಶ್ರವಣಬೆಳಗೊಳ

*ನೀವು ಚಕ್ರವರ್ತಿ ರಾಮನೋ, ಜಟಾಧಾರಿ ರಾಮನೋ?*

ಚಕ್ರವಿರುವ ವಾಹನಗಳಲ್ಲೇ ಓಡಾಡುವುದರಿಂದ – ಚಕ್ರವರ್ತಿಯೇ.

ಎಸ್. ಕುಮಾರಸ್ವಾಮಿ, ಚಿಕ್ಕಬಳ್ಳಾಪುರ

*ನಿಮಗೆ ಎಂತಹ ಕನಸುಗಳೆಂದರೆ ಇಷ್ಟ?*



ನಿದ್ರೆಗೆ ಭಂಗ ತರದೆ, ಬದುಕಿಗೆ ರಂಗು ತರುವಂತಹವು.

ಜವಳಿ ಜಯ್ಯಣ್ಣ, ದಾವಣಗೆರೆ

*ಸ್ತ್ರೀರಾಜಕಾರಣಿಗೂ, ಪುರುಷ ರಾಜಕಾರಣಿಗೂ ಏನು ವ್ಯತ್ಯಾಸ?*

ಸ್ತ್ರೀಗೆ ರಾಜಕಾರಣಿಯಾಗುವುದಕ್ಕೆ ಮುಂಚಿನಿಂದಲೂ ಫಾಲೋಯರ್ಸ್ ಇರುತ್ತಾರೆ.

ಎಂ.ಎನ್. ಸೋಮಶೇಖರ್, ಮೈಸೂರು

*ದೇವರು ಸರ್ವವ್ಯಾಪಿಯಾಗಿರುವಾಗ ದುಷ್ಟಶಕ್ತಿಗಳಿಗೆ ಜಾಗವಿರಲು ಹೇಗೆ ಸಾಧ್ಯ?*

ಬಾಯಿ ಭರ್ತಿ ಮಂತ್ರ ತುಂಬಿದ್ದರೂ ಉಗುಳು ಸಹ ಇರುವಂತೆ.

■ ರಾಮ್